


ಮೂಳೆ ತಜ್ಞ: ಮೂಳೆಯಲ್ಲಿ ನೋವು ಇದೆಯೆ?
ವ್ಯಕ್ತಿ: ಇದೆ, ಬಹಳ ನೋವಿದೆ.
ಮೂಳೆ ತಜ್ಞ: ಹಾಗಾದರೆ ಎಲ್ಲಿ ನೋಯುತ್ತಿದೆ?
ವ್ಯಕ್ತಿ: ನನಗಲ್ಲ ಸಾರ್, ನನ್ನ ಮಗನಿಗೆ!

★★★

ನಿರ್ದೇಶಕ: ಈಗ, ಆ ಎತ್ತರದ ಸ್ಥಳದಿಂದ ಸಮುದ್ರಕ್ಕೆ ಧುಮುಕು.
ನಟ: ಸಾರ್, ಏನಾದರೂ ಅನಾಹುತವಾದರೆ?
ನಿರ್ದೇಶಕ: ಇದು ಈ ಚಿತ್ರದ ಕಡೆಯ ದೃಶ್ಯ ಕಣಯ್ಯ!

★★★

ಪತ್ರಕರ್ತ: ನಿಮ್ಮ ಕಚೇರಿಯಲ್ಲಿ ವಿವಾಹಿತ ಪುರುಷರಿಗೆ ಹೆಚ್ಚಾಗಿ ಕೆಲಸ ಕೊಡುತ್ತೀರಲ್ಲ ಏಕೆ?

ಮಾಲೀಕ: ಏಕೆಂದರೆ, ಅವರು ಮನೆಗಿಂತ ಇಲ್ಲಿಯೇ ಹೆಚ್ಚು ಹೊತ್ತು ಇರಲು ಬಯಸುತ್ತಾರೆ!

★★★

ಗುರು: ನೀವು ಧ್ಯಾನವನ್ನು ಕಣ್ಮುಚ್ಚಿ ಮಾಡದೆ, ಕಣ್ಣು ಬಿಟ್ಟುಕೊಂಡೇ ಯಾವುದಾದರೂ ವಸ್ತುವಿನ ಮೇಲೆ ಕೇಂದ್ರೀಕರಿಸಬಹುದು.

ಶಿಷ್ಯ: ಟಿ.ವಿ.ಯ ಮೇಲಾದರೆ ಆಗಬಹುದೆ!

ಸಂಗ್ರಹ: ಶಂಕರೇಗೌಡ, ಮೈಸೂರು

---

ಹೆಂಡತಿ (ಗಂಡನಿಗೆ): ನನಗೆ ಇನ್ನಷ್ಟು ಹೊಸ ಸೀರೆಗಳು ಬೇಕು.
ಗಂಡ: ಈಗಾಗಲೇ ನಿನಗೆ ಸಾಕಷ್ಟು ಸೀರೆಗಳನ್ನು ಕೊಡಿಸಿದ್ದೇನಲ್ಲ!
ಹೆಂಡತಿ: ನಮ್ಮ ಅಕ್ಕಪಕ್ಕದವರು ಅದನ್ನೆಲ್ಲಾ ನೋಡಿಬಿಟ್ಟಿದ್ದಾರೆ.
ಗಂಡ: ಹಾಗಾದ್ರೆ ನಾವೀಗ ಮನೆ ಬದಲಾಯಿಸುವುದೇ ಒಳ್ಳೆಯದು ಅನ್ನಿಸುತ್ತೆ!

★★★

ಮಂಟನ ಕತ್ತೆ ಕಳೆದುಹೋಯ್ತು. ಅವನು ದೇವರಿಗೆ ಕೈ ಮುಗಿಯುತ್ತಾ, 'ದೇವರೇ ನಿನ್ನ ಕೃಪೆಯಿಂದ ನಾನಿಂದು ಬದುಕಿದೆ' ಎಂದು ಪದೇ ಪದೇ ಹೇಳುತ್ತಿದ್ದ.

ದಾರಿಹೋಕ: ಕತ್ತೆ ಕಳೆದು ಹೋದದ್ದಕ್ಕೆ ದೇವರಿಗೆ ಏಕೆ ಥ್ಯಾಂಕ್ಸ್ ಹೇಳುತ್ತಿರುವೆ?

ಮಂಟ: 'ಆ ಕತ್ತೆಯ ಮೇಲೆ ನಾನು ಕುಳಿತಿದ್ದರೆ, ನಾನೂ ಅದರೊಂದಿಗೆ ಕಳೆದು ಹೋಗುತ್ತಿದ್ದೆ. ದೇವರು ದೊಡ್ಡವನು ನನ್ನನ್ನು ಕಾಪಾಡಿದ...' ಎಂದು ಹೇಳುತ್ತಾ ಮತ್ತೆ ಆಕಾಶಕ್ಕೆ ಕೈ ಜೋಡಿಸಿದ!

ಸಂಗ್ರಹ: ಶಾಂತ, ಬೆಂಗಳೂರು




---




**ಫೇಸ್ ಬುಕ್**

ಅಪ್ಪ ಮಗನಿಗೆ ಫೇಸ್ ಬುಕ್ ಸಂದೇಶ ಕಳಿಸಿದ; ಮಗೂ ಹೇಗಿದ್ದೀಯಾ, ಇಲ್ಲಿ ನಾನು ನಿನ್ನ ಅಮ್ಮ ಎಲ್ಲಾ ಚೆನ್ನಾಗಿದ್ದೇವೆ. ನಿನ್ನನ್ನು ಬಹಳ ಮಿಸ್ ಮಾಡಿಕೊಳ್ಳುತ್ತಾ ಇದ್ದೇವೆ. ಬೇಗ ಮಹಡಿಯಿಂದ ಕೆಳಗಿಳಿದು ಬಾ, ಊಟದ ಸಮಯವಾಯಿತು!

ಸಂಗ್ರಹ: ನಡಹಳ್ಳಿ ವಸಂತ್, ಶಿವಮೊಗ್ಗ

**ಕಾಪಿ ಮಾಡ್ಬೇಡಿ!**

ಒಬ್ಬ ಭಾಷಣಕಾರ ಸೊಗಸಾಗಿ ಭಾಷಣ ಮಾಡುತ್ತಿದ್ದ. ಭಾಷಣದ ಮಧ್ಯೆ 'ನಾನು ನನ್ನ ಜೀವನದ ಅತ್ಯಂತ ಸಂತಸದ ಕ್ಷಣಗಳನ್ನು ನನ್ನ ಹೆಂಡತಿಯಲ್ಲದ ಒಬ್ಬಾಕೆಯ ತೋಳಲ್ಲಿ ಕಳೆದಿದ್ದೇನೆ' ಎಂದು ಹೇಳಿದ. ಇಡೀ ಸಭೆ ಸ್ತಬ್ಧವಾಯಿತು. ಕೆಲವು ಕ್ಷಣಗಳ ನಂತರ ಆತ ಹೇಳಿದ 'ಅವಳು ನನ್ನ ತಾಯಿಯಾಗಿದ್ದಳು!' ಎಲ್ಲರೂ ಮೆಚ್ಚುಗೆಯಿಂದ ಕರತಾಡನ ಮಾಡಿದರು.

ತನ್ನ ಶ್ರೋತೃಗಳನ್ನು ಬೆರಗುಗೊಳಿಸಲು ಮಾಡಿದ ಈ ತಂತ್ರದಿಂದ ಪ್ರಭಾವಿತನಾದ ಒಬ್ಬಾತ ಇದನ್ನು ತನ್ನ ಹೆಂಡತಿಯ ಮುಂದೆ ಪ್ರದರ್ಶಿಸಲು ತೀರ್ಮಾನಿಸಿ 'ನಾನು ನನ್ನ ಜೀವನದ ಅತ್ಯಂತ ಸಂತಸದ ಕ್ಷಣಗಳನ್ನು ಹೆಂಡತಿಯಲ್ಲದ ಒಬ್ಬಾಕೆಯ ತೋಳಲ್ಲಿ ಕಳೆದಿದ್ದೇನೆ' ಎಂದು ಹೇಳಿದ. ಅವನ ಹೆಂಡತಿಗೆ ಭಯಂಕರ ಸಿಟ್ಟು ಕೋಪ ಬಂತು. 'ನಿನ್ನ ಯೋಗ್ಯತೆಯೇ ಇಷ್ಟು' ಎಂದು ಕಿರುಚಾಟದಿಂದ ಮುಂದಿನ ಭಾಗ ಮರತೇ ಹೋಯ್ತು. 'ಅಯ್ಯೋ ಅವಳು ಯಾರೆಂದು ಮರತೇ ಹೋಯ್ತು ಕಣೇ' ಅಂದು ಬಿಟ್ಟ.

ಮರು ದಿನ ಅವನು ಆಸ್ಪತ್ರೆಯ ಹಾಸಿಗೆಯ ಮೇಲಿದ್ದ.

ಸಂಗ್ರಹ: ಕೆ.ಪಿ.ಸತ್ಯನಾರಾಯಣ